ಇ. ಸಕಾಲದಲ್ಲಿ ಹಣ ಬಿಡುಗಡೆ ಮಾಡದೇ ಇರುವುದರಿಂದ ಫಲಾನುಭವಿಗಳು ಕಷ್ಟ ಅನುಭವಿಸಿ ಸರಕಾರದ ಜನಪ್ರಿಯ ಯೋಜನೆಗಳಿಂದ ವಂಚಿತರಾಗಿ ಸಾಲಕ್ಕೆ ಮೊರೆ ಹೋಗುವ ಪರಿಸ್ಥಿತಿ ಸರ್ಕಾರವೇ ನಿರ್ಮಿಸಿದಂತಾಗುವುದಿಲ್ಲವೆ;

ಈ. 2003-04 ಸಾಲಿನಿಂದ ಆಶ್ರಯ ಮನೆಗಳ ಮಂಜೂರಾತಿಯೊಂದಿಗೆ ಹಣ ಬಿಡುಗಡೆ ಮಾಡಲಾಗುವುದೆ;

ಉ. ಸರ್ಕಾರ ಕೊಡುವ ರೂಪಾಯಿ 20000ಯಿಂದ ಮನೆಕಟ್ಟಿಕೊಳ್ಳಲು ಸಾಧ್ಯವೆ;

ಸದರಿ ಮೊತ್ತವನ್ನು ಕನಿಷ್ಟ ರೂ. 50000ಕ್ಕೆ ಹೆಚ್ಚಿಸಿ ಮನೆ ನಿರ್ಮಾಣಕ್ಕೆ ಸಹಾಯ ಮಾಡುವ ಯೋಜನೆ ಸರ್ಕಾರಕ್ಕಿದೆಯೆ?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು)

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ

ಈ. ಅವಶ್ಯಕತೆಗನುಗುಣವಾಗಿ ಹಣ ಬಿಡುಗಡೆ ಮಾಡಲಾಗುವುದು

ಉ. ಹೌದು

ಇಲ್ಲ

ಆರೋಗ್ಯ ಇಲಾಖೆಯಲ್ಲಿ ತೆರವಾದ ವೈದ್ಯರು ಮತ್ತು ಇತರೆ ಸಿಬ್ಬಂದಿಗಳ ನೇಮಕ

1481(2085) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಆರೋಗ್ಯ ಇಲಾಖೆಯಲ್ಲಿ ತೆರವಾದ ವೈದ್ಯರು, ತಾಂತ್ರಿಕ ಮತ್ತು ಇತರೆ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲಾಗುವುದೆಂದು ಈ ಹಿಂದೆ ನೀಡಲಾದ ಹೇಳಿಕೆಯನ್ನು ಅನುಷ್ಠಾನಕ್ಕೆ ತರಲಾಗಿದೆಯೇ?

ಆ. ಹಾಗಿದ್ದಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಕಳೆದ ಅಧಿವೇಶನದ ನಂತರ ನೇಮಿಸಲಾದ ವೈದ್ಯರು ಮತ್ತು ಸಿಬ್ಬಂದಿಗಳ ವಿವರವನ್ನು (ಆಸ್ಪತ್ರೆವಾರು ಒದಗಿಸುವುದು)

ಇ. ಸದರಿ ನೇಮಕದ ನಂತರ ತೆರವಾದ ಹುದ್ದೆಗಳೆಷ್ಟು? (ಆಸ್ಪತ್ರೆವಾರು ಒದಗಿಸುವುದು)

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ. ಹೌದು

ಆ. ಕಳೆದ ಅಧಿವೇಶನದ ನಂತರ ಕುಂದಾಪುರ ತಾಲ್ಲೂಕಿನಲ್ಲಿ ಈ ಕೆಳಗೆ ತೋರಿಸಿದಂತೆ ವೈದ್ಯರ ಮತ್ತು ಸಿಬ್ಬಂದಿಯನ್ನು ನೇಮಿಸಿದ ವಿವರ:

ಗುತ್ತಿಗೆ ಆಧಾರದಲ್ಲಿ ನೇಮಕಾತಿಗೊಳಿಸಿದ ವೈದ್ಯಾಧಿಕಾರಿಗಳ ಹುದ್ದೆ:

ಕ್ರ.ಸಂ	ಸಂಸ್ಥೆಯ ಹೆಸರು	ಸಂಖ್ಯೆ
1	ಪ್ರಾ.ಆ. ಕೇಂದ್ರ ವಂಡ್ಸೆ	1

1	2	3
2	ಪ್ರಾ.ಆ. ಕೇಂದ್ರ ಕೊಲ್ಲೂರು	1
3	ಪ್ರಾ.ಆ. ಘಟಕ, ಕೋಡಿ	1
4	ರಾಷ್ಟ್ರೀಯ ಕುಷ್ಠರೋಗ ನಿಯಂತ್ರಣ ಕೇಂದ್ರ ಕುಂದಾಪುರ	1

ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ನೇಮಕಾತಿ (ಖಾಯಂ)

1.	ಪ್ರಾ.ಆ. ಕೇಂದ್ರ, ಸಿದ್ದಾಪುರ	2
2	ಪ್ರಾ.ಆ. ಕೇಂದ್ರ, ಕುಂಭಾತಿ	1
3	ಪ್ರಾ.ಆ. ಕೇಂದ್ರ, ಬಡ್ಕಲ್ ಕಟ್ಟೆ	1
4	ಪ್ರಾ.ಆ. ಘಟಕ, ಹಾಕ್ಲಾಡಿ	1
5	ಪ್ರಾ.ಆ. ಘಟಕ, ಕೋಟೇಶ್ವರ	1
6	ಪ್ರಾ.ಆ. ಕೇಂದ್ರ, ಬೇಳ್ಳೆ	1
7.	ಪ್ರಾ.ಆ. ಕೇಂದ್ರ ಬಸ್ರೂರು	1

ಸಹಾಯಕ ದಂತ ಆರೋಗ್ಯಾಧಿಕಾರಿಗಳ ನೇಮಕಾತಿ:

1. ಸಾರ್ವಜನಿಕ ಆಸ್ಪತ್ರೆ, ಕುಂದಾಪುರ 1

ಇತರೆ ಸಿಬ್ಬಂದಿ ನೇಮಕಾತಿ:

1. ಸಾ. ಆಸ್ಪತ್ರೆ, ಕುಂದಾಪುರ, ಶುಶ್ರೂಷಕಿ 1
2. ಸಾ. ಆಸ್ಪತ್ರೆ, ಕುಂದಾಪುರ, ಗ್ರೂಫ್ ಡಿ 1

೩. ಸದರಿ ನೇಮಕದ ನಂತರ 169 ಹುದ್ದೆಗಳು ತೆರವಾಗಿವೆ. (ಆಸ್ಪತ್ರೆವಾರು ಪಟ್ಟಿ ಲಗತ್ತಿಸಿದೆ)

Annexure to LA unstarred question No. 2085

Sl.No.	Name of the Institution	Total No. of vacant post
1	2	3
1	General Hospital, Kundapur	27
2	PHC, Siddapur	10
3	PHC, Bidkalkatte	09
4	PHC, Kolluru	06
5	PHC, Baindur	09
6	PHC, Maravanthe	05
7	PHC, Aruru	04
8	PHC, Haladi	10
9	PHC, Gangolli	05
10	PHC, Shankaranarayana	11

1	2	3
11	PHC, Belve	09
12	PHC, Vandse	10
13	PHC, Kumbhashi	03
14	PHC, Nada	09
15	PHC, Basturu	06
16	PHC, Kirimanjeshwara	06
17	PHC, Keruru	04
18	PHC, Aluru	06
19	PHC, Kengina	05
20	PHC, Kodi	03
21	PHC, Koteshwara	01
22	PHC, Hakladi	04
23	PHC, Kodluru	02
24	PHC, Hallihole	05
	Total	**169**

ಕುಂದಾಪುರ ಸಾರ್ವಜನಿಕ ಆಸ್ಪತ್ರೆಯನ್ನು ರಾಜ್ಯ ವಲಯಕ್ಕೆ ವರ್ಗಾಯಿಸುವುದು.

1482(2087) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಉಡುಪಿ ಜಿಲ್ಲೆ, ಕುಂದಾಪುರ ಸಾರ್ವಜನಿಕ ಆಸ್ಪತ್ರೆಯನ್ನು ಕೆ.ಹೆಚ್.ಎಸ್.ಡಿ.ಪಿ ಯೋಜನೆಯಡಿಯಲ್ಲಿ 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಿದ್ದು, ಸದರಿ ಆಸ್ಪತ್ರೆಯನ್ನು ಜಿಲ್ಲಾ ಪಂಚಾಯತ್ ವ್ಯಾಪ್ತಿಯಿದ್ದ ರಾಜ್ಯ ವಲಯಕ್ಕೆ ವರ್ಗಾಯಿಸಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿಲ್ಲವೆ?

ಆ. ಬಂದಿದ್ದಲ್ಲಿ ಇದುವರೆವಿಗೆ ವರ್ಗಾಯಿಸದಿರಲು ಕಾರಣವೇನು? ಯಾವಾಗ ವರ್ಗಾಯಿಸುವ ಬಗ್ಗೆ ಆದೇಶ ಹೊರಡಿಸಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ. ಪ್ರಸ್ತಾವನೆ ಇದೆ.

ಆ. ಈ ಆಸ್ಪತ್ರೆಯನ್ನು ಕೆ.ಹೆಚ್.ಎಸ್.ಡಿ.ಪಿ. ಯೋಜನಾ ವ್ಯಾಪ್ತಿಗೆ ಒಳಪಡಿಸಿಕೊಂಡಿದ್ದು, ಯೋಜನಾ ಕಾರ್ಯಕ್ರಮಗಳು ಪ್ರಗತಿಯಲ್ಲಿದ್ದುದರಿಂದ ಇದುವರೆವಿಗೆ ವರ್ಗಾಯಿಸಲು ಸಾಧ್ಯವಾಗಲಿಲ್ಲ. ದಿನಾಂಕ: 1.4.2003 ರಿಂದ ಈ ಆಸ್ಪತ್ರೆಯು ರಾಜ್ಯ ವಲಯಕ್ಕೆ ಸೇರುವುದು.